# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1609
2. ಸದಸ್ಯರ ಹೆಸರು : ಡಾ: ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 18.03.2021.

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರಿನ ಯೋಜನೆ ಆದ "ಎತ್ತಿನಹೊಳೆ" ಯೋಜನೆ ಪ್ರಾರಂಭ ಆಗಿದ್ದು ಯಾವಾಗಿನಿಂದ; ಯೋಜನೆಯನ್ನು ವಿವರಿಸುವುದು; | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು 2013-14 ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದ್ದು, ಯೋಜನೆಯ ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಆ) | ಈ ಯೋಜನೆಗಾಗಿ ಅಂದಾಜು ನಿಗದಿ ಪಡಿಸಲಾದ ವೆಚ್ಚ ಎಷ್ಟು; ಇದುವರೆವಿಗೂ ಖರ್ಚು ಮಾಡಲಾದ ವೆಚ್ಚ ಎಷ್ಟು; | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ರೂ.12912.36 ಕೋಟಿಗಳ ಮೊತ್ತದ ವಿವರವಾದ ಯೋಜನಾ ವರದಿಗೆ ದಿನಾಂಕ: 17.02.2014 ರಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಗೆ ಫೆಬ್ರವರಿ 2021ರ ಅಂತ್ಯಕ್ಕೆ ರೂ.7796.32 ಕೋಟಿಗಳ ಸಂಚಿತ ವೆಚ್ಚ ಮಾಡಲಾಗಿರುತ್ತದೆ. |
| ಇ) | ಈ ಯೋಜನೆಗಾಗಿ ಅಗತ್ಯವಿರುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ; ಪಡೆದುಕೊಂಡಿದ್ದರೆ ವಿವರ ನೀಡುವುದು; | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಅಗತ್ಯವಿರುವ ಭೂಮಿಯ ಭೂಸ್ವಾಧೀನದ ವಿವರವನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ. |
| ಈ) | ಈ ಯೋಜನೆಯ ಭಾಗವಾದ "ಬೈರಗೊಂಡ್ಲು" ಜಲಾಶಯದ ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನು ಖರೀದಿಸಲಾಗಿದೆಯೇ; ಇದೂವರೆವಿಗೂ ಸ್ವಾಧೀನ ಪಡಿಸಿಕೊಂಡಿರುವ ಜಮೀನು ಎಷ್ಟು; ಈ ಜಮೀನಿಗಾಗಿ ಸರ್ಕಾರ ನಿಗದಿ ಪಡಿಸಿರುವ ದರ ಎಷ್ಟು; | ಇಲ್ಲ.<br><br>ಕೊರಟಗೆರೆ ತಾಲ್ಲೂಕಿನ ರೈತರು ದೊಡ್ಡಬಳ್ಳಾಪುರ ತಾಲ್ಲೂಕಿನ ರೈತರಿಗೆ ನೀಡುವ ಪರಿಹಾರ ದರದಂತೆ ಅವರಿಗೂ ಸಹಾ ಏಕರೂಪ ದರ ನೀಡಲು ಒತ್ತಾಯಿಸಿದ್ದರಿಂದ ಬೈರಗೊಂಡ್ಲು ಜಲಾಶಯದ ನಿರ್ಮಾಣ ಕಾಮಗಾರಿ ಪ್ರಾರಂಭಿಸುವಲ್ಲಿ ಅಡತಡೆ ಉಂಟಾಗಿದ್ದು, ದರ ನಿರ್ಧರಣೆಯ ಕುರಿತು ಪರಿಶೀಲನಾ ಹಂತದಲ್ಲಿರುತ್ತದೆ. |
| ಉ) | ಮೇಲ್ಕಂಡ "ಬೈರಗೊಂಡ್ಲು" ಜಲಾಶಯದ ಕಾಮಗಾರಿಯನ್ನು ಯಾವಾಗಿನಿಂದ ಪ್ರಾರಂಭಿಸಲಾಗುವುದು? | ಬೈರಗೊಂಡ್ಲು ಜಲಾಶಯ ನಿರ್ಮಾಣ ಕಾಮಗಾರಿಯ ಭೂಸ್ವಾಧೀನ ಸಮಸ್ಯೆಯು ಇತ್ಯರ್ಥಗೊಂಡ ನಂತರ ಅನುದಾನ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ವಹಿಸಲಾಗುವುದು |

**ಸಂಖ್ಯೆ: ಜಸಂಇ 39 ಡಬ್ಲ್ಯೂಎಲ್ಎ 2021**

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

## ವಿಧಾನ ಪರಿಷತ್ತು ಸದಸ್ಯರಾದ ಮಾನ್ಯ ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ: 1335 (1609) ಕ್ಕೆ ಅನುಬಂಧ-1

ಕುಡಿಯುವ ನೀರಿನ ತೀವ್ರ ಅಭಾವ ಎದುರಿಸುತ್ತಿರುವ ರಾಜ್ಯದ ಹಾಸನ, ಚಿಕ್ಕಮಗಳೂರು, ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ ರಾಜ್ಯದ ಪಶ್ಚಿಮಾಭಿಮುಖವಾಗಿ ಹರಿಯುವ ಹಳ್ಳಗಳಿಂದ 24.01 ಟಿ.ಎಂ.ಸಿ ನೀರನ್ನು ಬಳಸಿಕೊಂಡು ಸುರಕ್ಷಿತ ಕುಡಿಯುವ ನೀರು ಒದಗಿಸುವ ಹಾಗೂ ಅಂತರ್ಜಲ ಮರುಪೂರಣಕ್ಕಾಗಿ ಈ ಭಾಗಗಳಲ್ಲಿನ ಸುಮಾರು 527 ಸಣ್ಣ ನೀರಾವರಿ ಕೆರೆಗಳಿಗೆ ಅವುಗಳ ಸಾಮರ್ಥ್ಯದ ಶೇ 50% ರಷ್ಟು ನೀರು ತುಂಬಿಸುವ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ರೂ.12,912.36 ಕೋಟಿ ಮೊತ್ತದ ಪರಿಷ್ಕೃತ ಯೋಜನಾ ವರದಿಗೆ ಸರ್ಕಾರದಿಂದ ದಿನಾಂಕ:17/2/2014 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು 2 ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ:

1) **ಮೊದಲನೇ ಹಂತ:** ಪಶ್ಚಿಮಾಭಿಮುಖವಾಗಿ ಹರಿಯುವ ಎತ್ತಿನಹೊಳೆ, ಕಾಡುಮನೆಹೊಳೆ, ಕೇರಿಹೊಳೆ, ಹೊಂಗದಹಳ್ಳ ಮುಂತಾದ ಹಳ್ಳಗಳಿಗೆ ಅಡ್ಡಲಾಗಿ 8 ಸ್ಥಳಗಳಲ್ಲಿ ವಿಯರ್‌ಗಳನ್ನು ನಿರ್ಮಿಸಿ, RL 729.00 ಮೀ ನಿಂದ RL 800.00 ಮೀ ನಲ್ಲಿ 4 ಹಂತಗಳಲ್ಲಿ 24.01 ಟಿ.ಎಂ.ಸಿ ನೀರನ್ನು ಎತ್ತಿ RL 965.00 ಮೀ ನಲ್ಲಿನ ವಿತರಣಾ ತೊಟ್ಟಿಗೆ ನೀರನ್ನು ಹರಿಸುವುದು.

2) **ಎರಡನೇ ಹಂತ:** 260 ಕಿ.ಮೀ ಉದ್ದದ ಗುರುತ್ವ ಕಾಲುವೆ, ಟಿ.ಜಿ.ಹಳ್ಳಿ ಮತ್ತು ರಾಮನಗರ ಫೀಡರ್ ಕಾಲುವೆ, ಮಧುಗಿರಿ ಫೀಡರ್ ಕಾಲುವೆ, ಗೌರಿಬಿದನೂರು ಫೀಡರ್ ಕಾಲುವೆ ಹಾಗೂ ಬೈರಗೊಂಡ್ಲು ಜಲಾಶಯ ನಿರ್ಮಾಣ ಕಾಮಗಾರಿ, ಬೈರಗೊಂಡ್ಲು ಜಲಾಶಯದಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳಿಗೆ ನೀರೊದಗಿಸುವ ಕುಂದಾಣ ಲಿಫ್ಟ್ ಕಾಮಗಾರಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಫೀಡರ್ ಕಾಲುವೆಗಳ ನಿರ್ಮಾಣ.

**ಭೌತಿಕ ಪ್ರಗತಿ:**

**ಮೊದಲನೇ ಹಂತ:** ಮೊದಲನೆ ಹಂತದ ಏತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಭೌತಿಕ ಪ್ರಗತಿಯ ಪ್ರಸ್ತುತ ಹಂತದ ವಿವರ ಈ ಕೆಳಗಿನಂತಿದೆ.

- ✓ ಒಟ್ಟಾರೆ 8 ವಿಯರ್‌ಗಳ ಪೈಕಿ ವಿಯರ್ ಸಂ. 1,4,5,6,8 ಕಾಮಗಾರಿಗಳು ಪೂರ್ಣಗೊಂಡಿದ್ದು, ವಿಯರ್ ಸಂ.2, 7 ರ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ. ವಿಯರ್-3ಕ್ಕೆ ಸಂಬಂಧಿಸಿದಂತೆ GPS co-ordinates ನಲ್ಲಿ ಕಂಡು ಬಂದಂತಹ ವ್ಯತ್ಯಾಸದಿಂದ ಅರಣ್ಯ ಇಲಾಖೆಯ ಆದೇಶದಂತೆ ಕಾಮಗಾರಿಗಳು ಸ್ಥಗಿತಗೊಂಡಿದ್ದವು. ಆದರೆ, ಸದರಿ GPS co-ordinates ಗಳ ಮರು ಪರಿಶೀಲನೆಯ ನಂತರ ಈ ಹಿಂದೆ 2015ರಲ್ಲಿ ಅನುಮತಿಸಲ್ಪಟ್ಟ ಪ್ರದೇಶದಲ್ಲಿ ಪಂಪ್‌ಹೌಸ್ ಸಂ.3 ಮತ್ತು ವಿಯರ್-3ರ ಕಾಮಗಾರಿಗಳನ್ನು ಇತ್ತೀಚೆಗೆ ಪುನರ್-ಪ್ರಾರಂಭಿಸಲಾಗಿರುತ್ತದೆ. ಬಾಕಿ ಉಳಿದ Changein GPS co-ordinates ಗೆ ಸಂಬಂಧಿಸಿದ ಗೊಂದಲ ನಿವಾರಣೆ ಕುರಿತು ಅರಣ್ಯ ಇಲಾಖೆಯೊಂದಿಗೆ ವ್ಯವಹರಿಸಲಾಗುತ್ತಿದೆ.
- ✓ 9 ಪಂಪ್‌ಹೌಸ್‌ಗಳ ಪೈಕಿ ಪಂಪ್‌ಹೌಸ್ ಸಂ. 3 ಹೊರತುಪಡಿಸಿ ಇನ್ನುಳಿದ ಎಲ್ಲಾ 8 ಪಂಪ್‌ಹೌಸ್ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.
- ✓ 4 ವಿತರಣಾ ತೊಟ್ಟಿಗಳ ಪೈಕಿ ವಿತರಣಾ ತೊಟ್ಟಿ ಸಂ.3 ನ್ನು ಹೊರತುಪಡಿಸಿ ಇನ್ನುಳಿದ ವಿತರಣಾ ತೊಟ್ಟಿಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ವಿತರಣಾ ತೊಟ್ಟಿ 3 ರ ಕಾಮಗಾರಿಯು ಪ್ರಗತಿಯಲ್ಲಿದೆ.
- ✓ ಒಟ್ಟು 126.31 ಕಿ.ಮೀ ಉದ್ದದ ಏರುಕೊಳವೆಯ ಪೈಕಿ, ಇದುವರೆಗೆ 112 ಕಿ.ಮೀ ಏರುಕೊಳವೆ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.
- ✓ 400/220 ಕೆ.ವಿ ವಿದ್ಯುತ್ ಸ್ಥಾವರ ಮತ್ತು ಸಬ್‌ಸ್ಟೇಷನ್ ಕಾಮಗಾರಿಗಳು ಕ್ರಮವಾಗಿ ಶೇ.95% ಮತ್ತು ಶೇ.85% ರಷ್ಟು ಪೂರ್ಣಗೊಂಡಿವೆ.

✓ ವಿದ್ಯುತ್ ವಿತರಣಾ ಕಾಮಗಾರಿ: ಎಲ್ಲಾ 08 ಸಬ್ ಸ್ಟೇಷನ್‌ಗಳಿಗೆ ವಿದ್ಯುತ್ ಅನ್ನು 324 ಟವರ್ ಗಳ ನಿರ್ಮಾಣ ಮಾಡಿ ವಿದ್ಯುತ್ ವಾಹಕಗಳನ್ನು ಅಳವಡಿಸಿ, ವಿದ್ಯುತ್ ಅನ್ನು ಸರಬರಾಜು ಮಾಡಲಾಗುವುದು. ಒಟ್ಟು 324 ಟವರ್ ಗಳ ಪೈಕಿ ಇಲ್ಲಿಯವರೆಗೆ 179 ಟವರ್‌ಗಳನ್ನು ಅಳವಡಿಸಲಾಗಿದೆ ಹಾಗೂ 52.25 ಕಿ.ಮೀ ಉದ್ದದ ವಿದ್ಯುತ್ ವಾಹಕ ಸಂಬಂಧಿಸಿದಂತೆ 16.4 ಕಿ.ಮೀ ವಿದ್ಯುತ್ ವಾಹಕವನ್ನು ಅಳವಡಿಸಲಾಗಿದೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.

✓ ಒಟ್ಟಾರೆ ಮೊದಲನೇ ಹಂತದ ಏತ ಕಾಮಗಾರಿಗಳು ಮತ್ತು ವಿದ್ಯುತ್ ಕಾಮಗಾರಿಗಳನ್ನು ಪೂರ್ಣಗೊಳಿಸಿ 2021ರ ಮುಂಗಾರಿನಲ್ಲಿ ಪ್ರಾಯೋಗಿಕವಾಗಿ ನೀರನ್ನು ಹರಿಸಿ, ಯೋಜನೆಯನ್ನು ಭಾಗಶಃ ಚಾಲನೆಗೊಳಿಸಲು ಯೋಜಿಸಲಾಗಿದೆ.

**ಎರಡನೇ ಹಂತ:** ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಎರಡನೇ ಹಂತದಲ್ಲಿ ಸಕಲೇಶಪುರ ತಾಲ್ಲೂಕಿನ ಹರವನಹಳ್ಳಿ ಹತ್ತಿರ ವಿತರಣಾ ತೊಟ್ಟಿಯಿಂದ 260.00 ಕಿ.ಮೀ ಉದ್ದದ ಗುರುತ್ವ ಕಾಲುವೆಯನ್ನು (ಮಾರ್ಗದ ಮಧ್ಯದಲ್ಲಿ ಸುಮಾರು 10.47 ಕಿ.ಮೀ ಉದ್ದದ ಮೇಲ್ಗಾಲುವೆ ಒಳಗೊಂಡಂತೆ) ನಿರ್ಮಿಸುವುದು ಹಾಗೂ ಸಂಬಂಧಪಟ್ಟ ಫೀಡರ್ ಕಾಲುವೆಗಳನ್ನು ನಿಮಿಸುವುದು, ಭೈರಗೊಂಡ್ಲು ಜಲಾಶಯ ನಿರ್ಮಾಣ, ಭೈರಗೊಂಡ್ಲು ಜಲಾಶಯದಿಂದ ಕುಂದಾಣ ವರಗೆ ನೀರನ್ನು ಎತ್ತುವ ಕಾಮಗಾರಿ, ಕೋಲಾರ ಮತ್ತು ಶ್ರೀನಿವಾಸಪುರ ಫೀಡರ್ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಿರುತ್ತದೆ.

✓ ಎರಡನೇ ಹಂತದ ಗುರುತ್ವ ಕಾಲುವೆಯ ಪೂರ್ಣ ಉದ್ದಕ್ಕೆ ಕಾಮಗಾರಿಗಳನ್ನು ಗುತ್ತಿಗೆ ವಹಿಸಲಾಗಿದ್ದು, ಕಿ.ಮೀ 0.00 ರಿಂದ ಕಿ.ಮೀ 240.00 ವರೆಗಿನ ಕಾಮಗಾರಿಗಳು ಪ್ರಗತಿಯಲ್ಲಿದ್ದು, (ಕಿ.ಮೀ 199.620 ನಿಂದ 210.090 ಕಿ.ಮೀ ವರೆಗಿನ ಬೃಹತ್ ಮೇಲ್ಗಾಲುವೆ ಒಳಗೊಂಡಂತೆ), ಸುಮಾರು 78 ಕಿ.ಮೀ ಉದ್ದದ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

✓ ಭೈರಗೊಂಡ್ಲು ಜಲಾಶಯ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಲು ಪೂರ್ವಸಿದ್ಧತಾ ಕೆಲಸ ಕಾರ್ಯಗಳನ್ನು ಕೈಗೊಂಡಾಗ ಕೊರಟಗೆರೆ ತಾಲ್ಲೂಕಿನ ರೈತರು ದೊಡ್ಡಬಳ್ಳಪುರ ತಾಲ್ಲೂಕಿನ ಭೂಸ್ವಾಧೀನ ದರಗಳಂತೆಯೇ, ಏಕರೂಪ ಪರಿಹಾರದರ ನೀಡಲು ಒತ್ತಾಯಿಸಿದ್ದರಿಂದ ಕಾಮಗಾರಿಯು ಪ್ರಸಕ್ತ ಸ್ಥಗಿತಗೊಂಡಿರುತ್ತದೆ.

**ಫೀಡರ್ ಕಾಲುವೆ ಕಾಮಗಾರಿಗಳು**

**ಭೈರಗೊಂಡ್ಲು ಜಲಾಶಯಕ್ಕಿಂತ ಮೊದಲು ಕವಲೊಡೆಯುವ ಫೀಡರ್ ಕಾಲುವೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.**

✓ **ಟಿ.ಜಿ.ಹಳ್ಳಿ ಮತ್ತು ರಾಮನಗರ ಫೀಡರ್:** ಎತ್ತಿನಹೊಳೆ ಗುರುತ್ವ ಕಾಲುವೆಯ ಸರಪಳಿ 244.90 ಕಿ.ಮೀ ನಿಂದ ಹೊರಡುವ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ನೆಲಮಂಗಲ ತಾಲ್ಲೂಕಿನ 2 ಕೆರೆಗಳನ್ನು ತುಂಬಿಸುವ ರಾಮನಗರ ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

✓ **ಮಧುಗಿರಿ ಫೀಡರ್:** ತುಮಕೂರು, ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಿಗೆ ಕುಡಿಯುವ ನೀರಿಗಾಗಿ 1.163 ಟಿ.ಎಂ.ಸಿ ಮತ್ತು ಈ ಭಾಗದ 79 ಸಣ್ಣ ನೀರಾವರಿ ಕೆರೆಗಳಿಗೆ 1.476 ಟಿ.ಎಂ.ಸಿ. ನೀರನ್ನುಒದಗಿಸುವ ಮಧುಗಿರಿ ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

✓ **ಗೌರಿಬಿದನೂರು ಫೀಡರ್:** ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರಿಗಾಗಿ 0.506 ಟಿ.ಎಂ.ಸಿ ಮತ್ತು ಗೌರಿಬಿದನೂರು, ಕೊರಟಗೆರೆ, ಮಧುಗಿರಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳ 107 ಸಣ್ಣ ನೀರಾವರಿ ಕೆರೆಗಳಿಗೆ 1.320 ಟಿ.ಎಂ.ಸಿ. ನೀರನ್ನು ಒದಗಿಸುವ ಗೌರಿಬಿದನೂರು ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಫೆಬ್ರವರಿ 2021ರ ಅಂತ್ಯಕ್ಕೆ ರೂ.7796.32 ಕೋಟಿಗಳ ಸಂಚಿತ ವೆಚ್ಚವಾಗಿರುತ್ತದೆ.

*****

**ವಿಧಾನ ಪರಿಷತ್ತು ಸದಸ್ಯರಾದ ಮಾನ್ಯ ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ: 1335 (1609) ಕ್ಕೆ ಅನುಬಂಧ-2**

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಭೂಸ್ವಾಧೀನದ ವಿವರಗಳು ಈ ಕೆಳಕಂಡಂತಿವೆ.

(ವಿಸ್ತೀರ್ಣ :(ಎ/ಗು. ಗಳಲ್ಲಿ)

| ಕ್ರ ಸಂ | ಭೂಸ್ವಾಧೀನಾಧಿಕಾರಿಗಳು | ಯೋಜನೆಗೆ ಅಗತ್ಯವಿರುವ ಜಮೀನಿನ ವಿವರ | ಕಲಂ 11(1)ರ ಅಧಿಸೂಚನೆ | ಕಲಂ 19(1)ರ ಅಧಿಸೂಚನೆ | ಭೂಸ್ವಾಧೀನ ಪಡಿಸಿಕೊಂಡ ವಿಸ್ತೀರ್ಣ | ಷರಾ |
|---|---|---|---|---|---|---|
| 1 | ಹಾಸನ | 2676–23.12 (ನೇರ ಖರೀದಿಯಡಿ 448–32.08 ಎ/ಗು) | 2676–23.12 | 2381–30 1/4 | – | ನೇರ ಖರೀದಿಯಡಿ ಸಕಲೇಶಪುರ ತಾಲ್ಲೂಕಿನ ಒಟ್ಟು 387 ಎಕರೆ – 38.04 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. |
| 2 | ತುಮಕೂರು | 5786–19 | 1808–26 | 362–35 | 362–35 | – |
| 3 | ದೊಡ್ಡಬಳ್ಳಾಪುರ | 2534–12 | – | – | – | – |
| | ನೆಲಮಂಗಲ ತಾಲ್ಲೂಕಿನ ಟಿ.ಜಿ. ಹಳ್ಳಿ-ರಾಮನಗರ ಫೀಡರ್ ಕಾಲುವೆ | 83–09 | 76–22 | – | – | – |
| | ಗೌರಿಬಿದನೂರು ಫೀಡರ್ ಕಾಲುವೆ, ದೊಡ್ಡಬಳ್ಳಾಪುರ | 53–00 | – | – | – | – |
| | ಗೌರಿಬಿದನೂರು ಫೀಡರ್ ಕಾಲುವೆ, ಗೌರಿಬಿದನೂರು | 92–28 | – | – | – | – |
| ಒಟ್ಟು | | 11226–11.12 (ನೇರ ಖರೀದಿಯಡಿ 448 ಎಕರೆ – 32.08 ಗುಂಟೆ) | 4561–31.12 | 2744–25.04 | 362–35 | 387 ಎಕರೆ – 38.04 ಗುಂಟೆ ಜಮೀನನ್ನು ನೇರ ಖರೀದಿಯಡಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ |

******